ದಿಃ **15-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು : 1 ರಿಂದ 3 ನೇ ಪ್ರತಿವಾದಿ ಪರ : ಶ್ರೀ ಐಎಂಪಿ. ವಕೀಲರಿಂದಃ**

ನನ್ನ ಮುಖು ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತು. ನನ್ನ ತಾತ ಬಸ್ಸಪ್ಪ ಇವರ ತಮ್ಮನ ಹೆಸರು ಕರಿ ಬಸ್ಸಪ್ಪ ಎಂದರೆ ನಿಜ. ನನ್ನ ತಾತ ಬಸ್ಸಪ್ಪ ಇವರಿಗೆ 2 ಜನ ಹೆಂಡತಿಯರು ಇದ್ದರು. ಅವರೆಂದರೆ ಅಕ್ಕನಾಗಮ್ಮ ಮತ್ತು ಬಸಲಿಂಗಮ್ಮ ಎಂದು ಇರುತ್ತದೆ. ಅಕ್ಕನಾಗಮ್ಮ ಇವಳಿಗೆ ನಾಗಮ್ಮ ಎಂದು ಸಹ ಕರೆಯುತ್ತಿದ್ದರು. ಅಕ್ಕನಾಗಮ್ಮ ಇವಳಿಗೆ ಮಕ್ಕಳು ಇರುವುದಿಲ್ಲ. ನಮ್ಮ ಕುಟುಂಬ ವಂಶಾವಳಿಯಲ್ಲಿ ಅಕ್ಕನಾಗಮ್ಮನ ಹೆಸರನ್ನು ಕಾಣಿಸಿರುತ್ತೇನೆ. ಅಕ್ಕನಾಗಮ್ಮ ಇವಳ ಹೆಸರನ್ನು ವಂಶಾವಳಿಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನನಗೆ ಅನುಕೂಲವಾಗುವ ರೀತಿ ಸುಳ್ಳು ವಂಶಾವಳಿಯನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕಾಣಸಿದಂತೆ ನಮ್ಮ ಹಿರಿಯರ ಆಸ್ತಿಗಳಲ್ಲಿ ನಮ್ಮ ಮತು ಪ್ರತಿವಾದಿಯರಿಗೆ ಪಾಲು ಬಂದಿದ್ದು ಎಂದು ಕಾಣಿಸಿದ್ದು ಯಾರ ಯಾರ ಮದ್ಯ ಪಾಲು ಆಯಿತು ಮತು ಆ ರೀತಿ ಆಸ್ತಿಗಳು ನಿಮ್ಮ ಪಾಲಿಗೆ ಬಂದವು ಎಂಬ ಪ್ರಶ್ನೆಗೆ ಸಾಕ್ಷಿ ಕುಟುಂಬ ಆಸ್ತಿಯಲ್ಲಿ ವಿಬಾಗ ಆಗಿಲ್ಲ ಎಂದು ನುಡಿಯುತ್ತಾರೆ. ಪ್ಯಾರಾ ನಂಬರ್ 3 ರಲ್ಲಿ ನಮ್ಮ ಪಾಲಿಗೆ ಆಸ್ತಿಗಳು ಬಂದಿದ್ದು ಎಂದು ಬಂದದ್ದು ತಪ್ಪು ಇದೆ ಎಂದರೆ ಸರಿಯಲ್ಲ. ಕುಟುಂಬ ಆ ಸ್ತಿಯಲ್ಲಿ ನಮ್ಮ ತಂದೆಗೆ ಒಂದು ಬಾಗ ಹಾಗೂ ನಮ್ಮ ದೂಡ್ಡಪ್ಪ ಹನುಮಂತರಾಯ ಇವರಿಗೆ ಒಂದು ಬಾಗ ಬಂದಿರುತ್ತದೆ. ಆ ರೀತಿ 1980 ರಲ್ಲಿ ವಿಬಾಗ ಆಗಿರುತ್ತದೆ. ಆ ರೀತಿ 1980 ರಲ್ಲಿ ವಿಬಾಗ ಆದ ಬಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ವಿಬಾಗ ಮೌಖಿಕವಾಗಿ ಆಗಿರುತ್ತದೆ. ಆ ರೀತಿ ಮೌಖಿಕವಾಗಿ ವಿಬಾಗ ಆದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

ನನ್ನ ತಂದೆ ಬೀಮರೆಡ್ಡಿ ಮತು ನನ್ನ ದೊಡ್ಡಪ್ಪ ಹನುಮಂತರಾಯ ಸುಮಾರು 60 ವರ್ಷಗಳಿಂದ ಬೇರೆ ಬೇರೆ ಯಾಗಿ ಬೇರೆ ಬೇರೆ ಮನೆಗಳಲ್ಲಿ ವಾಸಿಸುತ್ತಾ ಬಂದಿರುತ್ತಾರೆ. 1969 ರಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ವಿಬಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ತನ್ನ ಅಜ್ಜಿ 1980 ರಲ್ಲಿ ವಿಬಾಗ ಆದ ಬಗ್ಗೆ ತನಗೆ ತಿಳಿಸಿರುವುದಾಗಿ ನುಡಿಯುತ್ತಾರೆ. ಜಮೀನುಗಳು ಆ ರೀತಿ ಬಾಗ ಆದಾಗ ನಾನು ಜನಿಸಿದ್ದೆನು. 1980 ರಲ್ಲಿ ಆದ ವಿಬಾಗ ಬಗೆ

ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ತನ್ನ ಅಜ್ಜಿ ಆ ಬಗ್ಗೆ ತಿಳಿಸಿರುವುದಾಗಿ ನುಡಿಯುತ್ತಾರೆ. ಸದರಿ ವಿಬಾಗದಲ್ಲಿ ಕಮಲಮ್ಮ ಇವರಿಗೆ ಯಾವುದೇ ಪಾಲು ನೀಡಿರಲ್ಲಿಲ್ಲ. ದಾವ ಆಸ್ತಿಗಳ ಪೈಕಿ 13 ಎಕರೆ 32 ಗುಂಟೆ ಜಮೀನು ಕಮಲಮ್ಮ ಇವರ ಹೆಸರಿನಲ್ಲಿ ಇತ್ತು. ಸರ್ವೇ ನಂ. 1050 ಇದರಲ್ಲಿ 9 ಎಕರೆ 30 ಗುಂಟೆ ಜಮೀನು ಸಹ ಕಮಲಮ್ಮ ಇವರ ಹೆಸರಿಗೆ ಇತ್ತು. ಕಮಲಮ್ಮ ಇವರ ಹೆಸರಿಗೆ ಆಸ್ತಿಗಳು ಯಾವ ಆದಾರದ ಮೇಲೆ ದಾಖಲು ಆದವು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾತ ಬಸ್ಸಪ್ಪ ನನ್ನ ಮಲತಾಯಿ ನಾಗಮ್ಮ ಇವರು ತಮ್ಮ ಹೆಸರಿಗೆ ಇದ್ದ ಸರ್ವೇ ನಂ. 190 ಮತ್ತು 1050 ಜಮೀನುಗಳನ್ನು ನಾಗಮ್ಮ ಇವಳ ಮರಣ ನಂತರ ಕಮಲಮ್ಮ ಇವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸಿಲಿಂಗ್ ಕಾಯಿದೆ ಪ್ರಕಾರ ಜಮೀನು ಸರಕಾರಕ್ಕೆ ಹೋಗಬಾರದು ಎಂಬ ಕಾರಣಕ್ಕೆ ಕಮಲಮ್ಮ ಇವರ ಹೆಸರಿಗೆ ತನ್ನ ತಾತ ವರ್ಗಾಯಿಸಿದರು ಎಂದು ನುಡಿಯುತ್ತಾರೆ. ಸಿಲಿಂಗ್ ಕಾಯಿದೆ ಯಾವಾಗ ಜಾರಿಗೆ ಬಂದಿತು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಕಾಯಿದೆ ಜಾರಿಗೆ ಬರುವ ಬಹಳ ಮುಂಚೆಯೇ ನನ್ನ ತಾತ ಬಸ್ಸಪ್ಪ ಸದರಿ ಜಮೀನುಗಳನ್ನು ಪ್ರೀತಿಯಿಂದ ತನ್ನ ಮಗಳಾದ ಕಮಲಮ್ಮ ಇವಳಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ಕಮಲಮ್ಮ ಇವಳ ಹೆಸರಿಗೆ ಸದರಿ ಜಮೀನುಗಳ ಮುಟೇಶನ್ ಆದೇಶ ನಂ. 69/1 ದಿಃ 23.12.1969 ರಂತೆ ದಾಖಲಾಗಿವೆ ಎಂದರೆ ಸರಿಯಲ್ಲ. ಸದರಿ ಜಮೀನುಗಳ ಕಮಲಮ್ಮ ಇವಳ ಸಂಪೂರ್ಣ ಹಕ್ಕಿನ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ನಮಗೆ ಯಾರಿಗೂ ಸಹ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ.

ಕಮಲಮ್ಮ ಇವಳು ತನ್ನ ಹೆಸರಿನಲಿದ್ದ ಸರ್ವೆ ನಂ. 190 ಆಸ್ತಿ ಪ್ರೀತಿಯಿಂದ 3 ನೇ ಪ್ರತಿವಾದಿ ಶರಣಗೌಡ ಇವರ ಹೆಸರಿಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ. 1050 ಜಮೀನನ್ನು ಕಮಲಮ್ಮ ಇವಳು ಪ್ರೀತಿಯಿಂದ 2 ನೇ ಪ್ರತಿವಾದಿ ಬಸನಗೌಡ ಇವರ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀ ಐಎಂಪಿ. ವಕೀಲರಿಂದಃ ವಕೀಲರು ಸಮಯ ಕೇಳಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.